2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸೆಷನ್ಸ್ ಕೇಸು ನಂಃ 128/2017</u>

| | | |
|---|---|---|
| ಸಾಕ್ಷಿದಾರರ ಹೆಸರು | - ವಲೇರಿಯನ್ ಮೆನೆಜಸ್ | ಪಿಡಬ್ಲೂ -04 |
| ತಂದೆಯ ಹೆಸರು | - ಮಾರ್ಷಲ್ ಮೆನೆಜಸ್ | ಸಿಡಬ್ಲೂ -08 |
| ವಯಸ್ಸು | - 58 ವರ್ಷ | |
| ಉದ್ಯೋಗ | - ನಿವೃತ್ತ ನೌಕರ, ಫಾದರ್ ಮುಲ್ಲರ್ ಆಸ್ಪತ್ರೆ, ಮಂಗಳೂರು | |
| ವಾಸ ಸ್ಥಳ | - ಮಂಗಳೂರು | |

ದಿನಾಂಕಃ 08.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿಲ್ಲ. ಚಾಸಾ.1 ಗೊತ್ತಿಲ್ಲ. ಚಾಸಾ.7 ಮತ್ತು 9 ಗೊತ್ತು. ಅವರಿಬ್ಬರು ನನ್ನ ಜೊತೆಯಲ್ಲಿ ಫಾದರ್ ಮುಲ್ಲರ್ಸ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಾರೆ.

2. ಈಗ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಮಹಜರನ್ನು ನಿಪಿ.7 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು.

3. ಏಳು ವರ್ಷದ ಹಿಂದೆ ಫಾದರ್ ಮುಲ್ಲರ್ಸ ಆಸ್ಪತ್ರೆಯಲ್ಲಿ ನಿಪಿ.7 ಕ್ಕೆ ಸಹಿ ಮಾಡಿರುತ್ತೇನೆ. ನಮ್ಮ ಆಸ್ಪತ್ರೆಯ ಕ್ಯಾಶುಯಲ್‌ಟಿ ಯಿಂದ ಪೊರೆನ್ಸಿಕ್ ವಿಭಾಗಕ್ಕೆ ಸೀಲು ಮಾಡಿ ಸಂಗ್ರಹಿಸಿಟ್ಟ ಚಾಕುವನ್ನು ಪೋಲೀಸರು ನನ್ನ, ಚಾಸಾ.7 ಮತ್ತು 9 ರವರ ಸಮಕ್ಷಮ ತನಿಖೆಗಾಗಿ ನಿಪಿ.7 ರ ಪ್ರಕಾರ ಮಹಜರು ಮಾಡಿ ಅಮಾನತು ಪಡಿಸಿಕೊಂಡರು.

4. ನಿಪಿ.7 ನ್ನು ತಯಾರಿಸುವ ಕಾಲಕ್ಕೆ ಪೋಲೀಸರು ಭಾವಚಿತ್ರವನ್ನು ತೆಗೆದಿದ್ದು, ಸದರಿ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದೆ. ನಿಪಿ.7 ಕ್ಕೆ ನಾನು, ಚಾಸಾ.8 ಮತ್ತು 9 ರವರು ಸಹಿ ಮಾಡಿರುತ್ತೇವೆ. ನಿಪಿ.7 ನ್ನು 2.00 ರಿಂದ 3.00 ಗಂಟೆವರೆಗೆ ಜರುಗಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿ ಪರವಾಗಿ</u>

5. ನಿಪಿ.7 ರಲ್ಲಿ ಬರೆದ ವಿಚಾರವನ್ನು ಪೋಲಿಸರು ನನಗೆ ಓದಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಪಿ.7 ರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.7 ರಂತೆ ಪೋಲೀಸರು ನನ್ನ, ಚಾಸಾ.7 ಮತ್ತು 9 ರವರ ಸಮಕ್ಷಮ ಮಹಜರು ಮಾಡಿ ಚಾಕುವನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.7 ಕ್ಕೆ ನಾನು ಪೋಲೀಸರ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಮಾನತುಪಡಿಸಿಕೊಂಡು ಚಾಕುವಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾದ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ